ಶ್ರೀ ಪಿ. ಪಿ. ಹೆಗಡೆ.—ಸ್ಥಾಪನೆ ಸದಲಗ ಗ್ರಾಮದಲ್ಲಿ ಶಿಶುವಿಹಾರ ಹಾಗೂ ಮಹಿಳಾ ಕಲ್ಯಾಣ ಕೇಂದ್ರಕ್ಕೆ ನೂಕ್ಕಪಾದ ಕಟ್ಟಡವೊಂದನ್ನು ಮಂಜೂರ್ಮಾಡಲು ಉದ್ದೇಶಿಸಿರುವರೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಮಹಿಳಾ ಕಲ್ಯಾಣ ಕೇಂದ್ರವನ್ನು ಎಲ್ಲಿ ನಡೆಸಬೇಕು ?

†ಶ್ರೀ ಎನ್. ರಾಚಯ್ಯ.—ಅಗತ್ಯ ಕಂಡು ಬಂದರೆ ಮಂಜೂರು ಮಾಡುತ್ತೇವೆ,

ಶ್ರೀ ಪಿ. ಪಿ. ಹೆಗಡೆ.—ನಾನು ಕೇಳಿದ ಉದ್ದೇಶವಿದು, ಸದಲಗ ಗ್ರಾಮದಲ್ಲಿ ಮಹಿಳಾ ಕಲ್ಯಾಣಕೇಂದ್ರ ಮಂಜೂರುಮಾಡಿದ್ದೀರಿ, ಕಟ್ಟಡ ಇಲ್ಲ. ಆ ಕಟ್ಟಡದ ನಲುವಾಗಿ ಈ ವರ್ಷದ ಬಡ್ಜೆಟ್‌ನಲ್ಲಿ ಸಾಕಷ್ಟು ಹಣ ಮಂಜೂರು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.— ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಅಗತ್ಯವಾಗಿ ಕಟ್ಟಡಕ್ಕೆ ಹಣವನ್ನು ಮಂಜೂರು ಮಾಡಿಕೊಡುತ್ತೇವೆ.

IRREGULAR PAYMENT OF SALARY TO THE STAFF OF BUNTWAL TALUK HOSPITAL.

348. Sri B. V. KAKKILAYA (Buntwal) .—

Will the Minister for Health be pleased to state :—

(*a*) when the Buntwal taluk Hospital was taken over by the Government from the Taluk Development Board;

(*b*) whether the staff of the Hospital every now and then experience difficulty in getting salary regularly for want of Government sanction and provision in the annual budget;

(*c*) the steps taken by Government to see that the staff get their salary regularly ?

Sri H. SIDDAVEERAPPA (Minister for Health) .—

(*a*) On 1st October 1970.

(*b*) No.

(*c*) Does not arise.

ಶ್ರೀ ಎಂ. ಎಸ್. ಕೃಷ್ಣನ್.—ಸಂಬಂಧಪಟ್ಟ ಅಲ್ಲಿನ ಪ್ರಮುಖರು ಎಂ. ಎಲ್. ಎ. ಅವರು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದು, ಈ ರೀತಿ ವೇತನ ಪಡೆಯುತ್ತಾ ಇಲ್ಲ. ತೊಂದರೆ ಯಾಗುತ್ತಿದೆಯೆಂದು ಬರೆದರೆ, ನಮುಂಜನವಾಗಿ ಉತ್ತರ ಕೊಡುತ್ತೇನೆಂದು ಹೇಳಿಲ್ಲವೆ? ಆ ಪ್ರಶ್ನೆಗೆ ಉತ್ತರ ಇಲ್ಲ ಎಂದು ಹೇಳಿದ್ದೀರಿ. ಅದಕ್ಕೂ ಇದಕ್ಕೂ ವಿರೋಧಭ್ಯಾಸವಾಗುವುದಿಲ್ಲವೇ ?

† ಶ್ರೀ ಎಚ್. ಸಿದ್ದವೀರಪ್ಪ.—ಅವರು ಸಂಬಳ ಸಾರಿಗೆ ಪಡೆಯುವಲ್ಲಿ ಸಾಕಷ್ಟು ತೊಂದರೆ ಯಾಗಿದೆಯೇ ಎಂದು ಕೇಳಿದ್ದೀರಿ, ಅದಕ್ಕೆ ಇಲ್ಲ ಎಂದು ಹೇಳಿದ್ದೇವೆ. ಅಲ್ಲಿ ಏನಾಗಿದೆಯೆಂದರೆ, ತಾಲ್ಲೂಕು ಬೋರ್ಡ್ ಕಾಂಟ್ರಿಬ್ಯೂಷನ್ ವಿಚಾರದಲ್ಲಿ ಅವರು ಸರಿಯಾದ, ನಿಖರವಾದ ಜವಾಬು ಕೊಟ್ಟಿಲ್ಲ. ಅಕೌಂಟೆಂಟ್ ಜನರಲ್ ಫೈನಲ್ ಆರ್ಡರ್ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಆದರೂ ಲೋಕರ್‌ಬೋರ್ಡ್ ಆದಷ್ಟು ಬೇಗ ಒಂದು ತೀರ್ಮಾನ ಹೇಳಿದರೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಸರಿಹೋಗುತ್ತದೆ, ಆದುದರಿಂದ ಇಲ್ಲಿಯವರಿಗೆ ಪ್ರೊವಿಜನರ್ ಅಥರೈಸೇಷನ್ ಇಷ್ಯೂ ಮಾಡುತ್ತಾ ಇದ್ದೇವು. ಇದು ಮೊನ್ನೆ 28-2-1974 ರಂದು ಎಕ್ಸ್‌ಟ್ರೆಮ್ಲಿ ಅರ್ಜೆಂಟ್ ಮೇಲೆ ಸರ್ಕಾರದವರು ಕಾಗದ ಬರೆದು, ರೆಗ್ಯುಲರೈಸ್ ಆಗುವವರೆಗೆ ಇನ್ನೂ ಆರು ತಿಂಗಳು ಕಂಟಿನ್ಯೂ ಮಾಡಿ ಎಂದು ಎ.ಜಿ.ಯವರಿಗೆ ಪ್ರಾರ್ಥನೆ ಮಾಡಿಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಎ ಜಿ.ಯವರಿಗೆ ಪ್ರಾರ್ಥನೆ ಮಾಡಿಕೊಂಡಿದ್ದೇವೆಂದು ಹೇಳಿದಿರಿ. ಲೋಕಲ್ ಬೋರ್ಡ್‌ನವರು ಕಾಲುವೆಗಳಿಂದ ಮಾಡುತ್ತಾರೆ, ಅದನ್ನು ಕಂಡುಹಿಡಿದು ಅದಷ್ಟು ಜಾಗ್ರತೆ ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶಮಾಡಿಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ,—ಲೋಕಲ್ ಬೋರ್ಡ್‌ನವರು ಏಕೆ ಮಾಡಲಿಲ್ಲ ಎಂದು ನಾನು ಹೇಗೆ ಹೇಳಲಿ ? ಅವರು ಎಷ್ಟು ಜಾಗ್ರತೆ ಮಾಡಿದರೆ ಅಷ್ಟು ಜಾಗ್ರತೆ ರೆಗ್ಯುಲರೈಸ್ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ. ಈ ದೇಶದಲ್ಲಿ ಆಸ್ಪತ್ರೆಗಳನ್ನು ತಾಲ್ಲೂಬೋರ್ಡ್‌ಗಳು ನಡೆಸುತ್ತಾ ಇವೆ. 1-10-1970 ರಂದು ಸರ್ಕಾರ ಈ ಆಸ್ಪತ್ರೆಯನ್ನು ವಹಿಸಿಕೊಳ್ಳಲು ತೀರ್ಮಾನ ತೆಗೆದು ಕೊಂಡು ಈ ಆಸ್ಪತ್ರೆಯನ್ನು ವಹಿಸಿಕೊಂಡಿದೆ ಎಂದು ಹೇಳಿದ್ದೀರಿ. ಈ ರೀತಿ ಇರುವಾಗ ಈ ಒಂದಕ್ಕೆ ಮಾತ್ರ ನೇರವಾಗಿ ಸಂಬಳ ಕೊಡತಕ್ಕ ವ್ಯವಸ್ಥೆ ಏನು ಮಾಡಿದ್ದೀರಿ, ಇದು ಹಿಂದಿನ ಸರ್ಕಾರ ಮಾಡಿದಂಥ ಒಂದು ಆರ್ಡರ್‌ಏ ? ಮತ್ತು ಈಗ ಏನು ತೀರ್ಮಾನ ತೆಗೆದುಕೊಂಡಿದ್ದೀರಿ, ಈ ತೀರ್ಮಾನಯಾವಾಗ ಕಾರ್ಯರೂಪಕ್ಕೆ ಬರುತ್ತದೆ ?

ಶ್ರೀ ಹೆಚ್. ಸಿದ್ದವೀರಪ್ಪ.—ಈ ಕೇಸಿನಲ್ಲಿ ಗವರನ್‌ಮೆಂಟ್ ಆರ್ಡರ್ ಅನುಸರಿಸಿ ಲೋಕಲ್ ಬೋರ್ಡ್ ಕಾಂಟ್ರಿಬ್ಯೂಷನ್ ಕೊಡಬೇಕಾಗಿತ್ತು. ಅವರು ಪೆನಷನರಿ ಕಾಂಟ್ರಿಬ್ಯೂಷನ್ ಕೊಡದೇ ಇದ್ದುದರಿಂದ ಅದು ನಿಂತಿದೆ. ಲೋಕರ್ ಬಾಡಿಸ್‌ಗೆ ಹೇಳಿದ್ದೇವೆ. ತಾಲ್ಲೂಕ್ ಬೋರ್ಡ್ ಹಾಸ್ಪಿಟಲ್ ಸರ್ಕಾರದವರು ವಹಿಸಿಕೊಳ್ಳಬೇಕು ಎಂದು ಕೈಗೊಂಡ ತೀರ್ಮಾನ ತೀರ್ಮಾನದಲ್ಲೇ ಇದೆ, ಅದು ಕಾರ್ಯಗತವಾಗಿಲ್ಲ. ಕಾರ್ಯಗತವಾಗಬೇಕಾದರೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಅದಕ್ಕೆ ಹಣ ಒದಗಿಸಬೇಕು, ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಹಣ ಬಂದಮೇಲೆ ಅದನ್ನು ಮಾಡಬೇಕು.

SUPPLY OF SEEDS TO FARMERS OF HYDERABAD KARNATAKA.

364. Sri PRABHAKAR TELKAR (Kalagi) .—

Will the Minister for Agriculture and Animal Husbandry be pleased to state :—

(*a*) whether it has come to the notice of the Government that the seeds supplied to farmers in Hyderabad Karnataka area in general and Gulbarga district in particular were of very poor quality and as a result of which the farmers suffered heavy loss ;

(*b*) whether the Government is aware that the seeds of "Uddu" and Toor did not yield any crops ;

(*c*) whether any such complaints have been received from the farmers who have purchased seed on loan basis ;

(*d*) the rates at which all the seeds were purchased and the rates at which they were sold to the farmers (the rate of each variety of seed may be given separately ?

Sri N. CHIKKE GOWDA (Minister for Agriculture and Animal Husbandry) .—

(*a*) No.